ಹಣ್ಣುಗಳ ಕುಯಿಲಿಗಾಗಿ ಸಿದ್ದವಾಗಿದ್ದಂತ ಅವುಗಳನ್ನು ರೈತರಿಂದ ಪಡೆಯಲು ಕಂಪನಿಯಯೋಚಿಸಿದೆ. ಈ ವ್ಯವಸ್ಥೆಯಿಂದ ರೈತರಿಂದ ಕಂಪನಿಯು ತಾಳೆಹಣ್ಣುಗಳನ್ನು ಸ್ವೀಕರಿಸದಿರುವ ಪ್ರಶ್ನೆಯಾಗಲಿ ಅಥವಾ ಅವರಿಗೆ ನಷ್ಟ ತುಂಬುವ ಪ್ರಮೇಯವಾಗಲಿ ಉದ್ಭವಿಸುವುದಿಲ್ಲ.

ಛೇರ್ಮನ್ : ಈಗ ಸಭೆಯು ಮೇಲೆದ್ದು ಮತ್ತೆ 2.00 ಗಂಟೆಗೆ ಸಮಾವೇಶಗೊಳ್ಳುವುದು.

(ಶ್ರೀ ವಿ.ಎಸ್. ಕೌಜಲಗಿ, ಅಧ್ಯಕ್ಷರು, ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಸದನವು ಮತ್ತೆ 2-32ಕ್ಕೆ ಸಮಾವೇಶಗೊಂಡಿತು.

ಸಭಾಧ್ಯಕ್ಷರ ಅನುಮತಿಯ ಮೇರೆಗೆ ಪ್ರಸ್ತಾಪಿಸಲಾದ ವಿಷಯ. ಅಂಗನವಾಡಿ ಕಾರ್ಯಕರ್ತೆಯರ ಗಂಭೀರ ಸಮಸ್ಯೆಯ ಬಗ್ಗೆ ಪ್ರಸ್ತಾಪ.

ಶ್ರೀ ಆರ್. ವಿ. ದೇಶಪಾಂಡೆ : ಸನ್ಮಾನ್ಯ ಅಧ್ಯಕ್ಷರೇ , ನಾನು ಬಜೆಟ್ ಮೇಲೆ ಭಾಷಣ ಪ್ರಾರಂಭ ಮಾಡುವುದಕ್ಕೆ ಮುಂಚೆ ತಮ್ಮಿಂದ ವಿಶೇಷ ಅನುಮತಿ ಪಡೆದುಕೊಂಡು ಈ ಅಂಗನವಾಡಿ ಕಾರ್ಯಕರ್ತರ ವಿಷಯವನ್ನು ಎತ್ತುತ್ತಿದ್ದೇನೆ. ಇದು ಬಹಳ ಗಂಭೀರವಾದ ವಿಷಯ, ಅವರಿಗೆ ಅನೇಕ ಸಮಸ್ಯೆಗಳಿವೆ. ಇಡೀ ರಾಜ್ಯದಿಂದ ಸುಮಾರು 10-15 ಸಾವಿರ ಅಂಗನವಾಡಿ ಕಾರ್ಯಕರ್ತರು ಬೆಂಗಳೂರಿಗೆ ಬಂದಿದ್ದಾರೆ. ಅವರ ಬೇಡಿಕೆಗಳು ಸರ್ಕಾರಕ್ಕೆ ಗೊತ್ತಿದೆ, ಸಾಕಷ್ಟು ವರ್ಷಗಳಿಂದ ಅವರು ಹೋರಾಟ ಮಾಡುತ್ತಿದ್ದಾರೆ. ಆದರೂ ಕೂಡ ಅವರ ಬೇಡಿಕೆಗಳನ್ನು ಸರ್ಕಾರದವರು ಬಗೆಹರಿಸುವುದಕ್ಕೆ ಸಾಧ್ಯವಾಗಿಲ್ಲ. ಕೂಲಿ ಮಾಡತಕ್ಕ ಜನ , ದಿನಕ್ಕೆ 25-30 ರೂಪಾಯಿ ಗಳಿಸುತ್ತಾರೆ. ಆದರೆ, ಅಂಗನವಾಡಿ ಕಾರ್ಯಕರ್ತರು ಇಷ್ಟನ್ನೂ ಪಡೆಯುತ್ತಿಲ್ಲ. ಮನೆಯಲ್ಲಿ ಸಣ್ಣ ಮಗುವಿಗೆ ತಾಯಿ ರಕ್ಷಣೆ ಕೊಟ್ಟು ಬೆಳೆಸುತ್ತಾಳೆ. ಅವರ ನಂತರದ ಜವಾಬ್ದಾರಿ, ಪಾಠ ಹೇಳುವ ಎರಡನೇ ಜವಾಬ್ದಾರಿ ಈ ಅಂಗನವಾಡಿ ಕಾರ್ಯಕರ್ತೆಯರದು. ಇಂತಹ ಕಾರ್ಯಕರ್ತೆಯರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಅವರ ಸಮಸ್ಯೆಯನ್ನು ತಿಳಿದುಕೊಂಡು, ಆ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಬೇಕಾಗುತ್ತದೆ. ನನಗೆ ಗೊತ್ತು, ಈ ವಿಷಯವನ್ನು ಎತ್ತಿದ ತಕ್ಷಣವೇ, ಅಥವಾ ನಾಳೆಯೇ ಇವರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಡೀ ರಾಜ್ಯದಿಂದ ಬೆಂಗಳೂರಿಗೆ ಬಂದಿದ್ದಾರೆ. ಆ ಸಂಘದ ಪ್ರತಿನಿಧಿಗಳನ್ನು ಕರೆಯಿಸಿ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು, ಅವರ ಜೊತೆಯಲ್ಲಿ ಚರ್ಚೆ ಮಾಡಿ, ಅವರ ಸಂಬಳವನ್ನು ಹೆಚ್ಚು ಮಾಡುವುದಕ್ಕೆ, ಸಾಧ್ಯವಾಗುವಂತಿದ್ದರೆ, ಹೆಚ್ಚು ಮಾಡಿಕೊಡಬೇಕು. ಬೇರೆ ಡಿಮ್ಯಾಂಡ್‌ಗಳು ಏನಿವೆ ಅದರ ಬಗ್ಗೆಯೂ ಕೂಡ ತಾವು ಪರಿಶೀಲನೆ ಮಾಡಿ, ಅದಕ್ಕೆ ಒಂದು ಸೂಕ್ತ ಪರಿಹಾರ ಕಂಡುಹಿಡಿಯಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

* ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೇ, ಅತ್ಯಂತ ಗಂಭೀರವಾದ ವಿಷಯವಾದ್ದರಿಂದ ತಮ್ಮ ಅಪ್ಪಣೆ ಪಡೆದು ಎತ್ತಿದ್ದೇವೆ. ಇವತ್ತು 15-16 ಸಾವಿರ ಜನ ಕಾರ್ಯಕರ್ತರು ಬಂದಿದ್ದಾರೆ, ಇದು ಒಂದು ಸಾರಿ ಅಲ್ಲ, ಅನೇಕ ಸಾರಿ ಬಂದು ಮನವಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರು ಬೆಂಗಳೂರಿಗೆ ಬಂದು ಧರಣಿ ಮಾಡಿದ್ದಾರೆ, ಅವರನ್ನು ಬಂಧಿಸಿ ಬಿಡುಗಡೆ ಮಾಡಿದ್ದೀರಿ. ಅವರಿಗೆ ಬರೀ 230 ರೂಪಾಯಿ ಕೊಡುತ್ತೀರಿ, ನೂರಕ್ಕೆ 90

ಭಾಗ ಇರತಕ್ಕಂಥವರು ಮಹಿಳೆಯರು ಅವರ ಕೆಲಸಕ್ಕೆ ಕೊಡತಕ್ಕಂಥ ಈ ಸಂಬಳ ಏನಿದೆ ಇದು ಜೀತದಾಳುಗಳಿಗಿಂತ ಕಡಿಮೆ ಸಂಬಳ. ಅವರು ಅನೇಕ ಬೇಡಿಕೆಗಳನ್ನು ಇಟ್ಟಿದ್ದಾರೆ. ಅವರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಇವರು ಕೇಂದ್ರ ಸರ್ಕಾರದ ಜೊತೆ ಮಾತುಕತೆ ಆಡಬೇಕಾಗಿದೆ. ಅವರ ಮುಖಂಡರುಗಳನ್ನು ಕರೆಯಿಸಿ ಯಾವ ರೀತಿಯಲ್ಲಿ ಮಾತುಕತೆ ಮಾಡಬೇಕು ಎಂಬ ಬಗ್ಗೆ ವಿಚಾರ ಮಾಡಿದರೆ ಒಳ್ಳೆಯದು. ಅವರು ಪ್ರತಿ ವರ್ಷ ಶಾಸನಸಭೆ ಸೇರಿದಾಗ ಅವರು ಬಂದುಧರಣಾ ಮಾಡುತ್ತಿದ್ದಾರೆ, ಮೆರವಣಿಗೆ ಮಾಡುತ್ತಿದ್ದಾರೆ. ಅವರ ಒಂದು ಸಣ್ಣ ಸಮಸ್ಯೆಯನ್ನು ಇವತ್ತಿನವರೆಗೂ ಬಗೆಹರಿಸುವುದಕ್ಕೆ ಆಗಿಲ್ಲ. ರಾಜ್ಯದ ರಾಜ್ಯದ ಮೂಲೆ ಮೂಲೆಗಳಿಂದ ನಗರಕ್ಕೆ ಈಗಾಗಲೇ ಕನಿಷ್ಠ 10 ಸಾವಿರ ಜನ ಬಂದಿದ್ದಾರೆ. ಇನ್ನು ಅನೇಕ ಕಡೆಗಳಿಂದ ಬರುತ್ತಲಿದ್ದಾರೆ. ನಾನು ಆಗಲೇ ತಿಳಿಸಿದ ರೀತಿ ಹೆಣ್ಣು ಮಕ್ಕಳೇ ಜಾಸ್ತಿ, ಪ್ರತಿ ಹಳ್ಳಿ ಹಳ್ಳಿ ಕೇರಿ ಕೇರಿ ಬೀದಿ ಬೀದಿಗೆ ಹೋಗಿ ಬೆಳಿಗ್ಗೆಯಿಂದ ರಾತ್ರಿಯವರೆಗೂ ಕೆಲಸ ಮಾಡುತ್ತಾರೆ. ಅವರಿಗೆ ದಿನಕ್ಕೆ 8 ರೂಪಾಯಿ ಸಹ ಸಿಗುತ್ತಿಲ್ಲ. ದಯಮಾಡಿ ಸರ್ಕಾರ ಈ ಬಗ್ಗೆ ಪರಣಾಮಕಾರಿಯಾಗಿ ಪ್ರಾಮಾಣಿಕವಾಗಿ ಅವರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಕಾರ್ಯ ಪ್ರವೃತ್ತರಾಗಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

* ಶ್ರೀ ಕೆ. ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಆ ಮೇಡಂಗಳಿಗೆ ಒಂದು ತಿಂಗಳಿಗೆ 300-400 ರೂಪಾಯಿಗಳು ಸಂಬಳ ಕೊಡುತ್ತಿದ್ದಾರೆ. ಅವರು ಹಳ್ಳಿ ಹಳ್ಳಿಗೆ ಹೋಗಿ ಮನೆ ಮನೆಗೂ ಹೋಗಿ ಮಕ್ಕಳನ್ನು ಕರೆದುಕೊಂಡು ಬರಬೇಕು. ಆ ಹೆಣ್ಣು ಮಕ್ಕಳಿಗೆ 100-120 ರೂಪಾಯಿ ಕೊಡುತ್ತಾರೆ. ಅವರು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಕೆಲಸ ಮಾಡಬೇಕು. ಬೇರೆ ಕಡೆ ಎಲ್ಲರಿಗೂ ಸಂಬಳ ಹೆಚ್ಚು ಮಾಡುತ್ತಲೇ ಇರುತ್ತಾರೆ. ಬಿಡಿ ಅದರ ಬಗ್ಗೆ ನಾವು ಮಾತನಾಡುವಂತೆ ಇಲ್ಲ. ಈ ಬಡಪಾಯಿಗಳು ಏನು ಅಪರಾಧ ಮಾಡಿದ್ದಾರೆ? ಆ ಶಾಲೆಗೆ ಬರತಕ್ಕಂಥ ಮಕ್ಕಳು ಯಾವುವು? ತೀರಾ ದರಿದ್ರ ಬಡವರ ಅನಾಥರ ಮಕ್ಕಳು . ಆ ಮಕ್ಕಳನ್ನು ಕರೆದುಕೊಂಡು ಬರಬೇಕು, ಆ ಮಕ್ಕಳನ್ನು ಕ್ಲೀನ್ ಆಗಿ ನೋಡಬೇಕು, ನಾಲ್ಕು ಅಕ್ಷರ ಕಲಿಸಬೇಕು, ಅವರಿಗೆ ಎಲ್ಲಾ ವಿಧವಾಗಿ ಸ್ವಂತ ಮಕ್ಕಳಂತೆ ಆ ಮಕ್ಕಳನ್ನು ನೋಡಿಕೊಂಡು ಅವರ ಹಾರ್ಮೆಕೆ ಮಾಡಬೇಕು. ಇಂತಹವರಿಗೆ ಈ ಸರ್ಕಾರ ಇಷ್ಟೊಂದು ನಿರ್ಧಯವಾಗಿರಬೇಕಾದರೆ ಕಾರಣವೇನು? ಅಲ್ಲಿ ಕೆಲಸ ಮಾಡುವವರೆಲ್ಲಾ ಬಡವರು. ಅಲ್ಲಿಗೆ ಬರತಕ್ಕಂಥ ಮಕ್ಕಳೆಲ್ಲಾ ಬಡವರ ಮಕ್ಕಳು. ಈ ಕಾರಣಕ್ಕೋಸ್ಕರ ಸರ್ಕಾರಕ್ಕೆ ಅವರ ಬಗ್ಗೆ ತಾತ್ಸಾರ ಎಂದು ನನಗನಿಸುತ್ತದೆ. ಯಾವುದಾದರೊಂದು ಅಂಗನವಾಡಿಗೆ ಹೋಗಿ ಏಕೆ ಈ ಮಕ್ಕಳು ತಲೆ ಬಾಚಿಲ್ಲ ಎಂದು ಕೇಳಿದರೆ ಎಲ್ಲಾ ಬಡವರ ಮಕ್ಕಳು ಸ್ವಾಮಿ, ನಾವು ಆ ಕೆಲಸ ಮಾಡುತ್ತೇವೆ, ನಮ್ಮ ಶಕ್ತಿ ಮೀರಿ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ, ಕೆಲವು ಕಡೆಗಳಲ್ಲಿ ಮಗ್ಗಿ ಹೇಳಿ ಕೊಟ್ಟಿರುತ್ತಾರೆ, ಅಕ್ಷರ ಹೇಳಿಕೊಟ್ಟಿರುತ್ತಾರೆ, ಹಾಡು ಹೇಳಿಕೊಟ್ಟಿರುತ್ತಾರೆ, ಡ್ಯಾನ್ಸ್ ಹೇಳಿಕೊಡುತ್ತಾರೆ, ಇದರಿಂದ ಎಷ್ಟು ಅನುಕೂಲ ಆಗಿದೆ. ಅಂದರೆ ಕೂಲಿ ಮಾಡತಕ್ಕಂಥ ಕಾರ್ಮಿಕರು ಬೆಳಿಗ್ಗೆ ಒಂದು ಚೂರು ರೊಟ್ಟಿ ಕೊಟ್ಟು ಹೊಲಕ್ಕೆ ಹೋಗುತ್ತಾರೆ, ಆ ಹುಡುಗರು ಇನ್ನು ತಂದೆತಾಯಿಗಳು ಬರುವವರೆಗೂ ಬೀದಿಯಲ್ಲಿ ಮಣ್ಣು ಕಸ ಕೆಸರು ಕೊಳೆ ಅದರೊಳಗೆಲ್ಲಾ ಬಿದ್ದು ಅವು ಬದುಕಿ ಉಳಿಯಬೇಕು, ಅಂತಹ ಒಂದು ಪರಿಸ್ಥಿತಿಯನ್ನು ತಪ್ಪಿಸಿ ಒಳ್ಳೆಯ ಕೆಲಸ ಆಗಲಿ ಎಂದು ಕೇಂದ್ರ ಸರ್ಕಾರದವರು ಇಷ್ಟು ಹಣ ಕೊಟ್ಟು ರಾಜ್ಯ ಸರ್ಕಾರದವರು ಇಷ್ಟು ಹಣ ಒದಗಿಸಿ ಒಳ್ಳೆಯ ಕೆಲಸ ಮಾಡಿರುವಾಗ, ಅಲ್ಲಿ ಕೆಲಸ ಮಾಡುವವರಿಗೆ ಸಂಬಳ ಮಾತ್ರ ಕೊಡಬಾರದು ಅಂದರೆ ಯಾವ ನ್ಯಾಯ? ಏಕೆ ಈ ತಾರತಮ್ಯ?

ಅವರು ಚೆನ್ನಾಗಿ ಕೆಲಸ ಮಾಡಬೇಕು ಕಳೆದ ತಿಂಗಳ ಹಿಂದೆ 5 ಪರ್ಸೆಂಟ್ ಜಾಸ್ತಿ ಮಾಡಿದರು ಸರ್ಕಾರಿ ಅಧಿಕಾರಿಗಳಿಗೆ ಮಾಡಿಕೊಳ್ಳಲಿ ಇನ್ನು 10 ಪರ್ಸೆಂಟ್ ವಡಿಕೊಳ್ಳಿಲಿ. ಏಕೆಂದರೆ ದುಡ್ಡು ಎಲ್ಲಾ ಪೂರಾ ತೆರಿಗೆ ಕೊಡುವವರೆಗೆ ಏರಿಸುತ್ತಾರಾ ಆಮೇಲೆ ಏರಿಸುತ್ತಾರಾ ? ಆಮೇಲೆ ಏರಿಸುವುದಕ್ಕೆ ಆಗುವುದಿಲ್ಲ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ ಆದರೆ ಇವರು ಏನು ಮಾಡಿದ್ದರು? ಅದೇ ಟೈಮ್‌ನಲ್ಲಿ ಎಲ್ಲಾ ಅಧಿಕಾರಿಗಳಿಗೆ ಸರ್ಕಾರಿ ನೌಕರಿಗೆ ಸಂಬಳ ಏರಿಸಿದಾಗ ಈ ಬಡಪಾಯಿಗಳಿಗೆ ಸ್ವಲ್ಪ ಏರಿಸುವುದಕ್ಕೆ ಆಗುತ್ತಿರಲಿಲ್ಲವೇ? ನೀವು ಹೋಗಿ ನೋಡಬೇಕು ಅಲ್ಲಿ ಸಣ್ಣ ಸಣ್ಣ ಮಕ್ಕಳು 6 ತಿಂಗಳು 8 ತಿಂಗಳು ಒಂದು ವರ್ಷದ ಮಕ್ಕಳನ್ನೆಲ್ಲಾ ಕಟ್ಟಿಕೊಂಡು ಬಂದು ಹೊರಗಡೆ ಅಲ್ಲಿ ಪಾರ್ಕ್‌ನಲ್ಲಿ ಅಲಿಯಬೇಕಾದರೆ ಅವರ ಸಂಕಟ ಎಷ್ಟು ಇರಬೇಕು ಅವರು ಅಯ್ಯೋ ಅಂದರೆ ನಮ್ಮ ಸರ್ಕಾರಕ್ಕೆ ನಮ್ಮ ಮಿನಿಸ್ಟರ್‌ಗಳಿಗೆ ಒಳ್ಳೆಯದು ಆಗುತ್ತದೆಯೇ? ನೀವು ದಯವಿಟ್ಟು ಯೋಚನೆ ಮಾಡಿ ನೋಡಬೇಕು. ಅವರು ಈ ಸಮಾಜದವರಲ್ಲ, ಈ ಸಮಾಜದಲ್ಲಿ ಭಾಗಿಗಳು ಅಲ್ಲ ಯಾರು ಈ ಬಡವರ ಮಕ್ಕಳ ಶ್ರೇಯಸ್ಸಿಗೋಸ್ಕರ ಹಗಲು ರಾತ್ರಿ ದುಡಿಯುತ್ತಿದ್ದಾರೋ ಅವರನ್ನು ಇಷ್ಟೊಂದು ನಿಕೃಷ್ಟವಾಗಿ ಕಾಣುವುದು ಸರಿಯಲ್ಲ. ಅವರು ಬಿಜಾಪುರದಿಂದ ಬರಬೇಕು ಮತ್ತೆ ಅಲ್ಲಿಂದ ಇಲ್ಲಿಂದ ಬರಬೇಕು. ವರ್ಷಕ್ಕೆ ಎರಡು ಸಲ ಮೂರು ಸಲ ಅವರು ಚಳುವಳಿ ಮಾಡುತ್ತಲೇ ಇದ್ದಾರೆ. ಅವರ ತಾಳ್ಮೆಗೂ ಒಂದು ಮಿತಿ ಬೇಡವೇ? ಇವರಿಗೆ ವಿವೇಕ ಇಲ್ಲವೇ? ಯಾವುದು ಮಾಡಬೇಕು ಯಾವುದು ಬಿಡಬೇಕೆಂದು ಅಧಿಕಾರಿಗಳಿಗೆ ಗೊತ್ತಿಲ್ಲವೇ? 5 ಸಾವಿರ ಕೋಟಿ ತೆರಿಗೆ ಕೊಡತಕ್ಕಂಥ ಈ ದೇಶದಲ್ಲಿ ಈ ಬಡಪಾಯಿಗಳಿಗೆ 150 ರೂಪಾಯಿ ಜಾಸ್ತಿ ಮಾಡಿದರೆ ಇವರ ಗಂಟು ಹೋಗುತ್ತದೆಯೇ? ಇನ್ನು ಯಾವುದಾದರೂ ಬೇರೆ ಬಾಬ್ತಿನಲ್ಲಿ ಖರ್ಚು ಕಡಿಮೆ ಮಾಡಲಿ. ಅಧ್ಯಕ್ಷರೆ, ಇದು ನಿಮಗೂ ಗೊತ್ತು ನಮಗೂ ಗೊತ್ತು ಇಲ್ಲಿ ಇರುವವರಿಗೆಲ್ಲಾ ಗೊತ್ತು, ನಮ್ಮ ಎಲೆಕ್ಷನ್‌ನಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದ ವರೆಗೂ ಆ ಬಡಪಾಯಿಗಳು ದುಡಿದು ಓಟು ಮಾಡಿದ್ದಾರೆ. ಆ ಬಡಪಾಯಿಗಳ ಮಕ್ಕಳು ಬೀದಿಪಾಲಾಗುವುದನ್ನು ತಪ್ಪಿಸಿ, ಸಮಾಜದ ಒಳಗಡೆ ಅವರೂ ಒಂದು ರೂಮ್‌ನಲ್ಲಿ ಕುಳಿತು ತಿಂಡಿ ತಿನ್ನುವಂಥ, ನಾಗರೀಕತೆ ಸ್ವಲ್ಪ ಅಂಶ ಕಲಿತುಕೊಳ್ಳಲಿ ಎಂದರೆ, ನಾನು ಮೂರು ವರ್ಷದಿಂದ ನೋಡುತ್ತಿದ್ದೇನೆ, ಇದು ಐದು ಸಾರಿಯೋ, ಆರೂ ಸಾರಿಯೋ, ಅವರೂ ಎಷ್ಟು ಸಾರಿ ಕೇಳುತ್ತಾರೆ? ನ್ಯಾಯವಾಗಿ ನೋಡಿದರೆ ಅವರಿಗೆ 8 ದಿವಸಗಳೊಳಗೆ ಆಗಬೇಕಾಗಿತ್ತು. ಆ ಕಾರ್ಯಕರ್ತರು ಬಂದು ಚಳುವಳಿ ಮಾಡಿದರೆ ಆಗ ಏನಾದರೂ ಈ ಸರ್ಕಾರಕ್ಕೆ ಬುದ್ಧಿ ಬರುತ್ತದೆಯೇ ಎಂದು ನನಗನಿಸುತ್ತದೆ. ನಾನು ಮಾನ್ಯ ಸಚಿವರಿಗೆ ಮತ್ತು ಸರ್ಕಾರಕ್ಕೆ ಹೇಳುತ್ತೇನೆ, ಒಂದು ಕ್ಷಣ ನಿಧಾನ ಮಾಡದೆ ಅವರಿಗೆ ನ್ಯಾಯವಾಗಿ ಏನು ಕೊಡಬೇಕೋ ಅದನ್ನು ಕರೆಕ್ಟ್ ಆಗಿ ಮಾಡಿಸಿ. ಆ ರೀತಿ ಮಾಡುವುದರಿಂದ ಬಡವರಿಗೆ, ಅನಾಥ ಮಕ್ಕಳಿಗೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

* ಶ್ರೀಮತಿ ಮೋಟಮ್ಮ : ಸನ್ಮಾನ್ಯ ಅಧ್ಯಕ್ಷರೇ, ಈ ಸಮಸ್ಯೆ ಬಹಳ ಗಂಭೀರವಾದುದು. ಏಕೆಂದರೆ, ಕೇಂದ್ರ ಸರ್ಕಾರದವರು ಅವರ ವೇತನವನ್ನು ಪೆಟ್ಟಿಗೆ ಮಾಡಬೇಕು, ಅಂದರೆ ಹಿಂದೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಒಂದು ಹೇಳಿಕೆ ಕೊಟ್ಟು, ಅವರನ್ನು ಪರ್ಮನೆಂಟ್ ಮಾಡುವುದಕ್ಕಾಗುವುದಿಲ್ಲ, ಆದರೆ ಕನ್‌ಸಾಲಿಡೇಟೆಡ್ ಸ್ಯಾಲರಿ ಕೊಡುತ್ತೇವೆಂದು ಹೇಳಿದ್ದರು. ಅದಕ್ಕಾಗಿ ಸೆಂಟ್ರಲ್ ಗೌರ್ನಮೆಂಟ್‌ನವರು 5 ಪರ್‌ಸೆಂಟ್ ಅಥವಾ 10 ಪರ್‌ಸೆಂಟ್ ಇನ್‌ಕ್ರೀಸ್ ಮಾಡಿದ್ದಾರೆ. ಕೇಂದ್ರ ಸರ್ಕಾರ ಕೊಡುವ ಗ್ಯಾಂಟ್‌ಗೆ ನಮ್ಮ ರಾಜ್ಯ ಸರ್ಕಾರ ಮ್ಯಾಚಿಂಗ್ ಗ್ಯಾಂಟ್ ಕೊಡಬೇಕು. ಆದರೆ ಕೊಟ್ಟಿಲ್ಲ. ನಾನು ಒತ್ತಾಯ ಮಾಡುವುದೇನೆಂದರೆ ಈ ಬೆಲೆ ಏರಿಕೆ ಕಾಲದಲ್ಲಿ ಅವರು ಕಡಿಮೆ ಹಣದಲ್ಲಿ ಜೀವನ ಮಾಡುವುದಕ್ಕಾಗುವುದಿಲ್ಲ.400,500 ರೂಪಾಯಿ ಮಾಡಿದರೂ ಜೀವನ ಮಾಡುವುದಕ್ಕೆ

ಆಗುವುದಿಲ್ಲ. ಒಂದು ಟರ್ಮ್ ಆದ ಮಾಜಿ ಶಾಸಕರಿಗೆ 750 ರೂಪಾಯಿ ಒಂದು ಟರ್ಮ್‌ಗಿಂಥ ಹೆಚ್ಚಿಗೆ ಆದ ಮಾಜಿ ಶಾಸಕರಿಗೆ 1000 ಸಾವಿರ ರೂಪಾಯಿ ಪೆನ್‌ಷನ್ ಮಾಡಿದ್ದಾರೆ. ಅದೇ ರೀತಿ ಆ ಹೆಣ್ಣು ಮಕ್ಕಳು ಅಂಗನವಾಡಿ ಕಾರ್ಯಕರ್ತೆಯರಿಗೂ ಕನ್‌ಸಾಲಡೇಟೆಡ್ ಆಗಿ 1000 ಅಥವಾ 750 ರೂಪಾಯಿ ಸ್ಯಾಲರಿ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಶಿಫಾರಸ್ ಮಾಡಬೇಕು ಮತ್ತು ನಮ್ಮ ಸರ್ಕಾರದಿಂದ ಆ ಬಾಬತ್ತಿಗೆ ಏನು ಕೊಡಬೇಕೋ ಅದನ್ನು ಕೊಟ್ಟು ಸಹಾಯ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಹಾಗೆ ಆಯಾಗಳಿಗೆ 100 ರೂಪಾಯಿ ಕೊಡುತ್ತಿದ್ದಾರೆ. ಆಕೆಯೂ ಅಂಗನವಾಡಿ ಕಾರ್ಯಕರ್ತೆ ಜೊತೆಯಲ್ಲೇ ಕೆಲಸವನ್ನು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಮಾಡುವುದರಿಂದ ಆಕೆಗೂ ಸಹಾ ಸಮಾನ ವೇತನ ಕೊಡುವುದು ಒಳ್ಳೆಯದೆಂದು ನನ್ನ ಸಲಹೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಪರಿಶೀಲನೆ ಮಾಡುವ ಹಾಗೆ ತಿಳಿಸುತ್ತೇನೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು .

ಶ್ರೀ ಆರ್.ವಿ. ದೇಶಪಾಂಡೆ : ಮುಖ್ಯಮಂತ್ರಿಗಳೇ ಇಲ್ಲವೇ? ನನಗೇನೂ ಇಲ್ಲ ಶುರು ಮಾಡುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಆ ಮನೆಯಲ್ಲಿ ರಿಪ್ಲೈ ಕೊಡುತ್ತಿದ್ದಾರೆ, ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ವಿರೋಧ ಪಕ್ಷದ ನಾಯಕರು ತಮ್ಮ ಭಾಷಣ ಪ್ರಾರಂಭ ಮಾಡುತ್ತಿದ್ದಾರೆ, ಸಾಮಾನ್ಯವಾಗಿ ಆಯವ್ಯಯದ ಚರ್ಚೆ ಪ್ರಾರಂಭ ಮಾಡುವ ದಿವಸ ಮುಖ್ಯ ಮಂತ್ರಿಗಳು ಮತ್ತು ಸದನದ ಸದಸ್ಯರು ಹಾಗೂ ಅಧಿಕಾರಿ ವರ್ಗ ಬಹಳ ಎಚ್ಚರಿಕೆಯಿಂದ ಕುಳಿತಿರಬೇಕು. ಕೊನೆಯ ಪಕ್ಷ ಇವತ್ತೂ ಇರುವುದಿಲ್ಲವೆಂದರೆ ಹೇಗೆ? ಇದರ ಬಗ್ಗೆ ತಮಗೆ ಅನೇಕಸಾರಿ ಹೇಳಿದ್ದೇವೆ. ಈ ಸದನ ತಮಗೆ ಯಾವ ರೀತಿ ಕಾಣುತ್ತಿದೆ ಹೇಳಿ? ಯಾವ ಸಚಿವರುಗಳು ಸಭೆಗೆ ಬರುವುದಿಲ್ಲವೋ ಅಂಥವರು ರಾಜೀನಾಮೆ ಕೊಟ್ಟು ಹೋಗಿ ಎಂದು ಎಚ್ಚರಿಕೆ ಕೊಡಿ ಸ್ವಾಮಿ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಶುರು ಮಾಡುತ್ತೇನೆ, ಆದರೆ ನಾನು ಏನು ಹೇಳುತ್ತೇನೆಂದು ಅವರಿಗೆ ಗೊತ್ತಾಗಬೇಕಲ್ಲ, ಮೊನ್ನೆಯೂ ನಾನು ಮಾತನಾಡಿದಂಥ ಸಮಯದಲ್ಲಿ ಅವರು ಇರಲಿಲ್ಲ. ನಾವು ಜನರ ಸಮಸ್ಯೆ ಬಗ್ಗೆ ಹೇಳುತ್ತೇವೆ, ಅವರು ಅದನ್ನು ನೋಟ್ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಹೋಗಲಿ ಆಫೀಸರ್ಸ್ ಇದ್ದಾರೆಯೇ ಯಾವ ಆಫೀಸರ್ಸ್ ಇಲ್ಲ, ಫೈನಾನ್ಸ್ ಮಿನಿಸ್ಟರ್ ಇಲ್ಲ.

ಶ್ರೀ ಆರ್. ದಯಾನಂದರಾವ್ : ಸೆಕ್ರೆಟರಿಗಳಾದರೂ ಇರಬೇಕಾಗಿತ್ತು. ಅವರೂ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ. ನಿಮಗೆ ಎಂಬ್ಯಾಸ್‌ಮೆಂಟ್ ಮಾಡಬೇಕೆಂದು ನನಗೆ ಇಚ್ಛೆ ಇಲ್ಲ. ನಾನು ಶುರು ಮಾಡುತ್ತೇನೆ. ಆದರೆ ಇದು ಸರಿಯಾದ ನೀತಿ ಅಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಫೈನಾನ್ಸ್ ಸೆಕ್ರೆಟರಿಯವರನ್ನು ಕರೆಸುವುದಕ್ಕೆ ಹೇಳಿ ಕಳುಹಿಸಿದ್ದೇನೆ. ಮುಖ್ಯ ಮಂತ್ರಿಗಳಿಗೂ ಅದಷ್ಟು ಬೇಗ ಅಲ್ಲಿ ಮುಗಿಸಿಕೊಂಡು ಬರಲಿಕ್ಕೆ ತಿಳಿಸಿದ್ದೇನೆ.

ವಿತ್ತೀಯ ಕಾರ್ಯಕಲಾಪಗಳು
1993-94ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

* ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಸಭಾಧ್ಯಕ್ಷರೇ, ನಮ್ಮ ಸಂವಿಧಾನದ 202ನೇ ಕಲಮಿನ ಪ್ರಕಾರ ಈ ಅನ್ಯೂವಲ್ ಫೈನಾನ್ಶಿಯಲ್ಲಿ ಸ್ಟೇಟ್‌ಮೆಂಟನ್ನು ಸದನದ ಮುಂದಿಡಬೇಕಾಗುತ್ತದೆ. ಇದನ್ನು ಇಡುವಾಗ, that there is no scope for speech. ಒಂದು ಕನ್‌ವೆನ್‌ಷನ್ ಬಂದಿದೆ. ಫೈನಾನ್ಸ್ ಮಿನಿಸ್ಟರ್ಸ್, ಈ ಫೈನಾನ್ಶಿಯಲ್ ಸ್ಟೇಟ್‌ಮೆಂಟ್ ಓದುವಾಗ ಬರುವ ವರ್ಷದಲ್ಲಿ ಸರಕಾರದವರು ಯಾವ ಕಾಯಕ್ರಮವನ್ನು ಹಾಕಿಕೊಳ್ಳುತ್ತಾರೆ, ಆ ಕಾರ್ಯಕ್ರಮದ ಘೋಷಣೆಯನ್ನು ಮಾಡುತ್ತಾರೆ. ಈ ರೀತಿಯ ಘೋಷಣೆಯನ್ನು ಸರ್ಕಾರದವರು ಮಾಡುತ್ತಾರೆ, ಅದು That will have relevance to the state Plan Document and National Policies also. ಅಷ್ಟೇ ಅಲ್ಲ It Should reflect the Manifesto of the Party also.

ನಿಮ್ಮ ಪಕ್ಷದ ಮ್ಯಾನುಫೆಸ್ಟೊ ಸ್ಟೇಟ್ ಪ್ಲಾನ್ ಡಾಕ್ಯುಮೆಂಟ್, ಮತ್ತು ನ್ಯಾಶನಲ್ ಪಾಲಿಸಿ ಏನಿದೆ ಹೀಗೆ ಈ ಮೂರು ವಿಚಾರಗಳ ಹೊಂದಾಣಿಕೆಯಾಗ ಬೇಕಾಗುತ್ತದೆ. ಆಗ ಮಾತ್ರ ನಾವು ಹೇಳಬಹುದು, ಸರಕಾರವು ಜನರಿಗೆ ಏನು ಮಾತುಕೊಟ್ಟಿದೆ, ಯಾವ ಮ್ಯಾನುಫೆಸ್ಟೊದ ಮೂಲಕ ತಾವುಗಳು ಬಂದಿದ್ದೀರಿ ಅದರ ಪ್ರಕಾರ ನಡೆದುಕೊಳ್ಳುತ್ತಾ ಇದ್ದೀರಿ ಎಂದು ನಾವು ಹೇಳಬಹುದು. Manifesto is a mirror for you, I think the Parliamentary Affairs minister should agree to this. 1989ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಹುದೊಡ್ಡ ಬಹುಮತ ಸಿಕ್ಕಿತು. ಈ ರಾಜ್ಯದ ಇತಿಹಾಸದಲ್ಲಿ ಯಾವುದೇ ಪಕ್ಷಕ್ಕೂ ಕೂಡ ಇಷ್ಟು ದೊಡ್ಡ ಬಹುಮತವು ಇದುವರೆಗೂ ಸಿಕ್ಕಿಲ್ಲ. ದುರ್ದೈವದಿಂದ ಯಾವ ಮಾತನ್ನು ಇವರುಗಳು ಹೇಳಿದ್ದರು, ಅಂದರೆ ನಾವು ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡುತ್ತೇವೆ, ನಾವು ಬಡತನವನ್ನು ದೂರಮಾಡುತ್ತೇವೆ, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ಜನಾಂಗದವರ ಬಗ್ಗೆ ವೆಲ್‌ಫೇರ್ ಸ್ಕೀಮ್ಸ್ ತರುತ್ತೇವೆ, ಅವರ ಆರ್ಥಿಕಾಭಿವೃದ್ಧಿಯನ್ನು ಸಾಧಿಸುತ್ತೇವೆ, ಇತ್ಯಾದಿಯಾಗಿ ಏನು ಹೇಳಿದ್ದಾರೆ ಆ ಯಾವ ಮಾತುಗಳನ್ನು ಕೂಡ ಇವರಿಂದ ಜಾರಿಗೆ ತರಲು ಆಗಲಿಲ್ಲ. ನಿಮ್ಮ ಸರಕಾರವು ಅಡಳಿತಕ್ಕೆ ಬಂದ ನಂತರ ಇದು ನಾಲ್ಕನೇ ಮುಂಗಡಪತ್ರ . ಮಾನ್ಯ ವೀರೇಂದ್ರ ಪಾಟೀಲರು ಮತ್ತು ರಾಜಶೇಖರಮೂರ್ತಿಯವರು 1990-91ರಲ್ಲಿ ಏನು ಮುಂಗಡಪತ್ರವನ್ನು ಪ್ರೆಸೆಂಟ್ ಮಾಡಿದರು, ಅದರಲ್ಲಿ ಏನು ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದರು, ಅದಕ್ಕೆ ಬಂಗಾರಪ್ಪನವರು ತಿಲಾಂಜಲಿ ಕೊಟ್ಟರು. ಬಂಗಾರಪ್ಪನವರು 1991-92-93ರಲ್ಲಿ ಏನು ತಮ್ಮ ಮುಂಗಡಪತ್ರದಲ್ಲಿ ಘೋಷಣೆ ಮಾಡಿದರು ಅದಕ್ಕೆ ಮಾನ್ಯವೀರಪ್ಪಮೊಯಿಲಿಯವರು ತಿಲಾಂಜಲಿ ಕೊಟ್ಟರು. ಆದರೆ ಇಲ್ಲಿ ಮಾತ್ರ ಸರಕಾರದ ಬದಲಾವಣೆಯಾಗಿಲ್ಲ, ಒಂದೇ ಪಕ್ಷದ ಸರಕಾರವು ಅಸ್ತಿತ್ವದಲ್ಲಿದೆ. ಬದಲಾವಣೆಯನ್ನು ಮಾಡಿದ್ದರೆ ಯಾವ ಪ್ರಕಾರದಲ್ಲಿ ಮಾಡಿದ್ದಾರೆಂದು ನಾನು ಆ ಮೇಲೆ ತಮಗೆ ತಿಳಿಸುತ್ತೇನೆ. There is no continuity.